



ಸಾನ್ ಫ್ರಾ ಫಮ್, ಸಾನ್ ಟಾ ಯಾಯ್, ಸಾನ್ ಭಾವ್ ಟೀ ಎಂದೆಲ್ಲಾ ಕರೆಯಲಾಗುತ್ತದೆ. 'ಭಾವ್ ಫೋ' ಅಂದರೆ ರಕ್ಷಿಸುವ ಚೈತನ್ಯಗಳು [ಗಾರ್ಡಿಯನ್ ಸ್ಪಿರಿಟ್] ಎಂದರ್ಥ.

'ಸ್ಪಿರಿಟ್ ಹೌಸ್' ನಿರ್ಮಿಸಲು ಹಲವಾರು ನಿಯಮಗಳಿವೆ. ವೃಕ್ಷದ ಮುಂದೆ ಇದ್ದರೆ ಒಳ್ಳೆಯದು, ಮನೆಯ ನೆರಳು ಅದರ ಮೇಲೆ ಬೀಳಬಾರದು, ರಸ್ತೆ ಕಡೆಗೆ, ಶೌಚಾಲಯದ ಕಡೆ ಮುಖವಿರಬಾರದು, ಬಾಗಿಲಿನ ಎಡಭಾಗದಲ್ಲಿ ಇರಬಾರದು. ಉತ್ತರ ಅಥವಾ ಉತ್ತರ ಪೂರ್ವದ ಕಡೆ ಮುಖವಿರಬೇಕು. ಮನೆಯಲ್ಲಿರುವ ಬುದ್ಧನ ಕೋಣೆಗೆ ಹೊಂದಿಕೆಯಾಗುವಂತೆ ಇರಬೇಕು. ಜ್ಯೋತಿಷ್ಯ ಶಾಸ್ತ್ರ ಮತ್ತು ಮಾಲಿಕನ ಹಣಕ್ಕೆ, ಮನೆಗೆ ತಕ್ಕಂತೆ ಇದನ್ನು ಚಿಕ್ಕದಾಗಿ- ಅಥವಾ ದೊಡ್ಡದಾಗಿ ನಿರ್ಮಿಸಲಾಗುತ್ತದೆ.

ಮಾಲಿಕನ ಹುಟ್ಟಿದ ದಿನಕ್ಕೆ ಅನುಗುಣವಾಗಿ ಉದಾಹರಣೆಗೆ ಸೋಮ–(ಹಳದಿ೦, ಮಂಗಳ (–ಗುಲಾಬಿ೦, ಬುಧ–(ಹಸಿರು೦, ಗುರು (–ಚಿನ್ನದ), ಶುಕ್ರ (–ನೀಲಿ), ಶನಿ– (ನೇರಳೆ), ರವಿ (–ಕೆಂಪು) – ಹೀಗೆ ಆಯಾ ವಾರದ ಬಣ್ಣ ಹಚ್ಚುತ್ತಾರೆ. ತಮಗೆ ಯಾವುದೇ ರೀತಿಯ ಆಘಾತಗಳು ಬರದಿರಲಿ, ರೋಗಗಳು ಬರದಿರಲಿ, ಕೆಡುಕಾಗದಿರಲಿ ಎಂಬ ಭಾವನೆ ಈ ಆರಾಧನೆಯ ಹಿಂದಿದೆ. ಪದೇ ಪದೇ ಅಪಘಾತಗಳು ಸಂಭವಿಸಿ ಸಾವು ಸಂಭವಿಸಿದ ಸ್ಥಳಗಳಲ್ಲಿಯೂ 'ಸ್ಪಿರಿಟ್ ಹೌಸ್'ನ್ನು ಕಟ್ಟಲಾಗುತ್ತದೆ. ಬ್ಯಾಂಕಾಕ್ ನ ಸುವರ್ಣಭೂಮಿ ಏರ್ ಪೋರ್ಟ್‌ನಲ್ಲಿಯೂ ಸ್ಪಿರಿಟ್ ಹೌಸ್ ಇದೆ. ಆಯಾ ಸ್ಥಳದಲ್ಲಿರುವ ಆತ್ಮಗಳು ತಮಗೆ ಕೆಡುಕು ಮಾಡದಿರಲೆಂದು ಅವುಗಳನ್ನು ಸ್ಪಿರಿಟ್ ಹೌಸ್ ಗೆ ಆಮಂತ್ರಿಸಿ ಅಲ್ಲಿ ನೆಲೆಸಲು ಕೋರುತ್ತಾರೆ.

ಮರಣ ಹೊಂದಿದ ನಂತರ ಮರು ಹುಟ್ಟು ಪಡೆಯದೆ ತಾವಿರುವ ಸ್ಥಳದಲ್ಲಿ ಇದ್ದಿರಬಹುದಾದ ಆತ್ಮಗಳಿಗೆ, ತೀರಿಹೋದ ತಮ್ಮ ಹಿರಿಯರ ಆತ್ಮಗಳಿಗೆ ಶಾಂತಿ ಸಿಗಲಿ; ಅವುಗಳಿಂದ ತಮಗೆ ಏನೂ ತೊಂದರೆಯಾಗದಿರಲಿ ಎಂಬ ಭಯ 'ಸ್ಪಿರಿಟ್ ಹೌಸ್'ನ ನಿರ್ಮಾಣದ ಹಿಂದಿದೆ. ಅತೀವ ಕಾಳಜಿ ವಹಿಸಿ ಪವಿತ್ರ ಸ್ಥಾನದಲ್ಲಿ ವಿಧಿವತ್ತಾಗಿ ಸಾಂಪ್ರದಾಯಿಕವಾಗಿ ಕಟ್ಟಿಗೆ ಅಥವಾ ಕಾಂಕ್ರಿಟ್‌ನಿಂದ ಕಟ್ಟಿಸಿದ ಅದರ ಮುಂದೆ ಒಂದು ಟೇಬಲ್ ಸಹ ಇರುತ್ತದೆ. ಅಲ್ಲಿ ಆತ್ಮಗಳನ್ನು ತೃಪ್ತಿ ಪಡಿಸಲು, ಕೋಪವನ್ನು ಶಮನಗೊಳಿಸಿ, ತಣಿಸಲು ನಿಯಮಿತವಾಗಿ ಮನೆಯ ಯಜಮಾನ ಪ್ರತಿದಿನ ಬೆಳಿಗ್ಗೆ ಆಹಾರವಿಡುತ್ತಾನೆ. ಚಿಕನ್, ಕುಕೀಸ್, ಸಿಹಿಡೆಸರ್ಟ್, ಹಣ್ಣುಗಳು, ಮಲ್ಲಿಗೆಯ ಹಾರ, ಕಮಲದ ಹೂವು ಮುಂತಾದವುಗಳನ್ನು ಇಡುತ್ತಾರೆ. ಬಾಟಲ್‌ನ ಮುಚ್ಚಳ ತೆಗೆದು ಸ್ಟ್ರಾ ಇಟ್ಟ ನೀರು, ಫಾಂಟಾ, ಕೋಕಾ ಕೋಲಗಳನ್ನೂ ನಾವು ನೋಡಿದೆವು. ಕೆಂಪು ಪಾನೀಯ ಅವುಗಳಿಗೆ ಇಷ್ಟವಂತೆ.

'ಆತ್ಮಗಳಿಗೆ ಕೋಪ ಬರದಂತೆ ಅವುಗಳನ್ನು ಗೌರವಿಸಬೇಕು, ಅಲಕ್ಷ್ಯ ಮಾಡಬಾರದು. ಮನೆಯಲ್ಲಿ ಮಗು ಜನಿಸಿದಾಗ, ಪ್ರವಾಸ ಹೋಗುವಾಗ ಮನೆಯ ಆಗು–ಹೋಗುಗಳನ್ನು ಸ್ಪಿರಿಟ್‌ಗೆ ಹೇಳಿ ಹೋಗಬೇಕು. ಕಾಣಿಕೆಗಳನ್ನು ಕೊಡುವುದರಿಂದ ಆತ್ಮಗಳು ಶಾಂತವಾಗಿ ಸಂತೋಷವಾಗಿದ್ದು, ಮನೆಯವರಿಗೆ ಕ್ಷೇಮ– ಸಮೃದ್ಧಿ ಇತ್ತು ಕಾಪಾಡುತ್ತವೆ. ಇಲ್ಲದಿದ್ದರೆ ಒಳಿತೊ–, ಕೆಡುಕೊ ಅವುಗಳ ಮನ ಬಂದಂತೆ ಮಾಡುತ್ತವೆ' ಎನ್ನುವುದು ಇವರ ನಂಬಿಕೆ.

ನಾವು ನೋಡಿದ ಸ್ಪಿರಟ್ ಹೌಸ್ ಒಂದರಲ್ಲಿ ಬ್ರಹ್ಮ ಇದ್ದ. ಇನ್ನೊಂದರಲ್ಲಿ ಅಜ್ಜ–– ಅಜ್ಜಿ, ಸೇವಕರು, ಆನೆ, ಕುದುರೆ ನರ್ತಕಿಯರ ಪ್ರತಿಮೆಗಳಿದ್ದವು. ಕೆಲವೆಡೆ ಟಿ.ವಿ. ಕಾರೂ ಇರುತ್ತದಂತೆ. ಅವು ಅಲ್ಲಿರುವ ಆತ್ಮಗಳ ಓಡಾಟಕ್ಕೆ ಹಾಗೂ ಅವರ ಬೇಸರ ನೀಗಿ ಮನರಂಜನೆ ನೀಡುತ್ತದೆ ಎಂಬ ಕಲ್ಪನೆ ಅವರದ್ದು.

'ಸ್ಪಿರಿಟ್ ಹೌಸ್' ಹಳೆಯದಾಗಿ ಒಡೆದಿದ್ದರೆ ಅಥವಾ ಆ ಸ್ಥಳದ ಮಾಲೀಕರು ಬದಲಾದರೆ ಬೇರೆಯದನ್ನು ನಿರ್ಮಿಸುತ್ತಾರೆ. ಮಾಲಿಕ ಬದಲಾದಾಗ ಅವರ ಪೂರ್ವಿಕರಿಗಾಗಿ ನಿರ್ಮಿಸಬೇಕು. ಆಗ ಹಳೆಯದನ್ನು ಆಲದ ಮರದ ಕೆಳಗೆ ಅಥವಾ ಬುದ್ಧನ ದೇವಾಲಯದ ಬಳಿ ಇರಿಸಲಾಗುತ್ತದೆ. ಮನೆಯನ್ನು ವಿಸ್ತರಿಸಿ ನವೀಕರಿಸಿದರೆ ಸ್ಪಿರಿಟ್ ಹೌಸನ್ನೂ ನವೀಕರಿಸಬೇಕು. ಕಾಲಕಾಲಕ್ಕೆ ಬಣ್ಣ ಹಚ್ಚಿ ಹೊಸದರಂತೆ ಇರಿಸಲಾಗುತ್ತದೆ. ಅದು ಒಡೆದು ಮುರಿದು ಹಾಳಾಗಿರಬಾರದು.

ಥಾಯ್ಲೆಂಡ್‌ನಲ್ಲಿ ಸ್ಪಿರಿಟ್ ಹೌಸ್ ಇಲ್ಲದ ಕಟ್ಟಡಗಳು ಅಪರೂಪ. ಅವುಗಳಿಗೆ ಗೌರವ ಸಲ್ಲಿಸದೆ ಮರೆತರೆ ಭೂಮಿ, ಮರ, ನೀರು ಹಾಳಾಗುತ್ತದಂತೆ. ಹಳ್ಳಿಗಳಲ್ಲಿಯೂ 'ಸ್ಪಿರಿಟ್ ಹೌಸ್' ಇರುತ್ತವೆ. ಆದರೆ ಇಡೀ ಹಳ್ಳಿಗೆ ಒಂದು. ಅಲ್ಲಿ ಬೊಂಬು, ಕಟ್ಟಿಗೆಯಿಂದಲೂ ನಿರ್ಮಿಸುತ್ತಾರೆ. ಎಲ್ಲರೂ ಸೇರಿ ವರ್ಷಕ್ಕೊಮ್ಮೆ ತಾವು ಸೇವಿಸುವ ಆಹಾರ (ಹಂದಿಯ ಕಾಲು, ತಲೆಯನ್ನೂ!) ವನ್ನೇ ಅವುಗಳಿಗೆ ನೀಡಿ (ನೈವೇದ್ಯ) ನಂತರ ತಾವು ಸೇವಿಸುತ್ತಾರೆ.

ತಮಗಿಂತಲೂ ಶಕ್ತಿಶಾಲಿಯಾದ ದೈವ ಅಥವಾ ಶಕ್ತಿ ಇದೆ ತಮ್ಮನ್ನು ಕಾಯುತ್ತದೆ ಎಂಬ ನಂಬಿಕೆ ಪ್ರಪಂಚದೆಲ್ಲೆಡೆಯೂ ಇದೆ. ಪೂಜೆ ಅಥವಾ ಆರಾಧನೆಯ ರೀತಿಗಳು ಬೇರೆ ಬೇರೆ ಇರಬಹುದಷ್ಟೇ. ಥಾಯ್ಲೆಂಡಿನ ಆಚರಣೆಗಳು ಭಾರತದ ಆಚರಣೆಗಳಿಗೆ ಹತ್ತಿರವಾಗಿವೆ.